# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (1421)1251 |
| ಸದಸ್ಯರ ಹೆಸರು | : | ಶ್ರೀ. ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18.12.2025 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್, ಹೈಕೋರ್ಟ್, ಜಿಲ್ಲಾ ಅಥವಾ ಇತರ ಕೋರ್ಟ್ ಗಳಲ್ಲಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು;</td><td>ಜಲಸಂಪನ್ಮೂಲ ಇಲಾಖೆಯಡಿ ಬರುವ ನಾಲ್ಕು ನಿಗಮಗಳ ವ್ಯಾಪ್ತಿಯಲ್ಲಿ ಸುಪ್ರೀಂ ಕೋರ್ಟ್, ಹೈಕೋರ್ಟ್, ಜಿಲ್ಲಾ ಅಥವಾ ಇತರ ಕೋರ್ಟ್ ಗಳಲ್ಲಿ ಇರುವ ಪ್ರಕರಣಗಳ ಸಂಖ್ಯೆ ಕೆಳಗಿನಂತಿದೆ;
<table>
<tr><th>ನಿಗಮ</th><th>ಮಾನ್ಯ ಸುಪ್ರೀಂ ಕೋರ್ಟ್ ನಲ್ಲಿರುವ ಪ್ರಕರಣಗಳ ಸಂಖ್ಯೆ</th><th>ಮಾನ್ಯ ಹೈಕೋರ್ಟ್ ನಲ್ಲಿರುವ ಪ್ರಕರಣಗಳ ಸಂಖ್ಯೆ</th><th>ಮಾನ್ಯ ಜಿಲ್ಲಾ ಅಥವಾ ಇತರೆ ಕೋರ್ಟ್ ನಲ್ಲಿರುವ ಪ್ರಕರಣಗಳ ಸಂಖ್ಯೆ</th></tr>
<tr><td>KNNL</td><td>1523</td><td>9931</td><td>10,500</td></tr>
<tr><td>CNNL</td><td>6</td><td>344</td><td>3509</td></tr>
<tr><td>VJNL</td><td>0</td><td>88</td><td>2623</td></tr>
<tr><td>KBJNL</td><td>462</td><td>11808</td><td>17958</td></tr>
<tr><td>Total</td><td>1991</td><td>22171</td><td>34590</td></tr>
</table>
</td></tr>
<tr><td>ಆ)</td><td>ಈ ಪ್ರಕರಣಗಳು ಕಳೆದ ಎಷ್ಟು ವರ್ಷಗಳಿಂದ ಬ್ಬಾಕಿ ಉಳಿದಿದ್ದಲ್ಲಿ ಈ ಪ್ರಕರಣಗಳ ಇತ್ಯರ್ಥಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ಇದಕ್ಕಾಗಿ ಈವರೆಗೆ ವ್ಯಯಿಸಲಾದ ಹಣವೆಷ್ಟು;</td><td>ಜಲಸಂಪನ್ಮೂಲ ಇಲಾಖೆಯಡಿ ಬರುವ ನಾಲ್ಕು ನಿಗಮಗಳ ವ್ಯಾಪ್ತಿಯಲ್ಲಿ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ಕಳೆದ 5 ರಿಂದ 10 ವರ್ಷಗಳಿಂದ ಇತ್ಯರ್ಥವಾಗದೆ ಬಾಕಿ ಉಳಿದಿರುತ್ತವೆ.<br><br>ಇಲಾಖೆಯಲ್ಲಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ:<br><br>✓ ಕಾಲಕಾಲಕ್ಕೆ ವಿ.ಸಿ ಮುಖಾಂತರ ಸಭೆಗಳನ್ನು ಏರ್ಪಡಿಸಿ, ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಎಚ್ಚರಿಕೆ ನೀಡಿ ಮೇಲ್ಮನವಿ ಸಲ್ಲಿಸಲು ಮತ್ತು ಪ್ರಕರಣಗಳನ್ನು ಯಾವುದೇ ಕಾರಣಕ್ಕೆ ವಿಳಂಬ ಮಾಡದೇ ತ್ವರೀತಗತಿಯಲ್ಲಿ ಇತ್ಯರ್ತಪಡಿಸಲು ನಿರ್ದೇಶನ ನೀಡಲಾಗಿರುತ್ತದೆ. ತಪ್ಪಿತಸ್ಥ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಯಾವುದೇ ಮೂಲಾಜಿಲ್ಲದೆ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ.<br><br>✓ ಈ ಪ್ರಕರಣಗಳ ನಿರ್ವಹಣೆಯಲ್ಲಿ ವಿಳಂಬ ನೀತಿ ಅನುಸರಿಸುತ್ತಿದ್ದ ವಕೀಲರುಗಳನ್ನು ನಿಗಮದ ಪೆನಲ್ ದಿಂದ ತೆಗೆದುಹಾಕಲಾಗಿರುತ್ತದೆ.<br><br>✓ ವಿಳಂಬ ನೀತಿ ಅನುಸರಿಸುತ್ತಿದ್ದ ಭೂಸ್ವಾಧೀನಾಧಿಕಾರಿಗಳಿಗೆ ಕಾರಣ ಕೇಳಿ ನೋಟೀಸು ಜಾರಿ ಮಾಡಿ, ತಪ್ಪಿತಸ್ಥ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ.<br><br>✓ ಕಾಲಕಾಲಕ್ಕೆ ಸಭೆಗಳನ್ನು ಏರ್ಪಡಿಸಿ, ಮೇಲ್ಮನವಿ ದಾಖಲಿಸಲು ಯಾವುದೇ ಕಾರಣಕ್ಕೆ ವಿಳಂಬವಾಗದಂತೆ ಜಾಗ್ರತೆ ವಹಿಸುವಂತೆ ಅಧಿಕಾರಿ/ಸಿಬ್ಬಂದಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.<br><br>ಇತ್ಯರ್ಥವಾಗಿರುವ ಹಾಗೂ ಬಾಕಿ ಇರುವ ಪ್ರಕರಣಗಳ ವ್ಯಾಜ್ಯಕ್ಕೆ</td></tr>
</table>

<table>
<tr><td></td><td></td><td>ವಕೀಲರ ಶುಲ್ಕ ಸೇರಿದಂತೆ ಇತರೆ ಭತ್ಯಗಳನ್ನೊಳಗೊಂಡು ಈವರೆಗೂ ವೆಚ್ಚವಾಗಿರುವ (KBJNL, KNNL & CNNL - ಕಳೆದ 10 ವರ್ಷಗಳಿಂದ ಹಾಗೂ VJNL – 2017 ರಿಂದ) ಮೊತ್ತದ ನಿಗಮವಾರು ವಿವರ ಈ ಕೆಳಕಂಡಂತಿದೆ:<br>
<table>
<tr><th>ನಿಗಮ</th><th>ಪ್ರಕರಣಗಳ ವ್ಯಾಜ್ಯಕ್ಕೆ ವೆಚ್ಚವಾಗಿರುವ ಮೊತ್ತ (ರೂ. ಗಳಲ್ಲಿ)</th></tr>
<tr><td>KBJNL</td><td>10,39,26,650</td></tr>
<tr><td>KNNL</td><td>32,16,36,986</td></tr>
<tr><td>CNNL</td><td>3,62,95,265</td></tr>
<tr><td>VJNL</td><td>2,75,85,292</td></tr>
<tr><td>Total</td><td>48,94,44,193</td></tr>
</table></td></tr>
<tr><td>ಇ)</td><td>ಯೋಜನೆಗಳಿಗೆ ಸಂಬಂಧಿಸಿದ ಪ್ರಕರಣಗಳು ಬಾಕಿ ಇರುವ ಕಾರಣ ಕಾಲಮಿತಿಯೊಳಗೆ ಯೋಜನೆಗಳು ಮುಕ್ತಾಯಗೊಳ್ಳದೆ ಅಂದಾಜು ವೆಚ್ಚದಲ್ಲಿ ಪರಿಷ್ಕೃತವಾಗಿ ಪರೋಕ್ಷ ಆರ್ಥಿಕ ಹೊರೆ ಎದುರಾಗಿರುವುದು ಸರ್ಕಾರದ ಗಮನದಲ್ಲಿದೆಯೇ?</td><td>ಯೋಜನೆಗಳಿಗೆ ಸಂಬಂಧಿಸಿದ ಪ್ರಕರಣಗಳು ಬಾಕಿ ಇರುವ ಕಾರಣ ಕಾಲಮಿತಿಯೊಳಗೆ ಯೋಜನೆಗಳು ಮುಕ್ತಾಯಗೊಳ್ಳದೆ ಅಂದಾಜು ವೆಚ್ಚದಲ್ಲಿ ಪರಿಷ್ಕೃತವಾಗಿ ಪರೋಕ್ಷ ಆರ್ಥಿಕ ಹೊರೆ ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
<tr><td>ಈ)</td><td>ಹಾಗಿದ್ದಲ್ಲಿ, ತ್ವರಿತಗತಿಯಲ್ಲಿ ವಿಶೇಷ ಗಮನಹರಿಸಿ ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕೆ ಸರ್ಕಾರ ಪ್ರಯತ್ನಿಸುವುದೇ;</td><td>✓ ವಿಶೇಷ ಗಮನಹರಿಸಿ, ಬಾಕಿ ಇರುವ ಪ್ರಕರಣಗಳನ್ನು ಹಾಗೂ ಕಡಿಮೆ ಮೊತ್ತದ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಲೋಕ ಅದಾಲತ್ ಮುಂದೆ ಮಂಡಿಸಿ, ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
</table>

**ಜಸಂಇ 178 ಎಂಎಲ್ಎ 2025**

**(ಡಿ.ಕೆ ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**